

‘ಒಂದೊಂದು ಹೆಂಟೆಗೂ ಗುಕ್ಕುನೀರು ಕುಡಿದು ಈ ಮನೆ ಎಬ್ಬಿಸಿದ್ದೇನೆ’ ಎಂದು ಅಮ್ಮ ಆಗಾಗ್ಗೆ ಹೇಳುತ್ತಿದ್ದಳು. ಅಪ್ಪನ ಕಡೆ ನೋಡುತ್ತ ಹೇಳುವಾಗ ಅವಳ ಮುಖ ಅಭಿಮಾನದಿಂದ ಮಿರುಗುತ್ತಿತ್ತು. ಅವಳ ನೋಟ ಎದುರಿಸಲಾರದೆ ಅಪ್ಪ, ತುಟಿಯಲ್ಲೇ ನಗುತ್ತ ಎತ್ತಲೊ ಮುಖ ತಿರುಗಿಸುತ್ತಿದ್ದ. ಈ ನಾಟಕೀಯ ಸನ್ನಿವೇಶದ ಒಗಟನ್ನು ಅಮ್ಮ, ಅಪ್ಪನಿಲ್ಲವಾದ ಎಷ್ಟೊ ವರ್ಷಗಳ ಬಳಿಕ ಬಿಡಿಸಿಕೊಟ್ಟಳು. ಅವಳ ಪ್ರಕಾರ, ತಂದೆತಾಯಿ ಕಳೆದುಕೊಂಡು ಹೆಗಲು ತೊಳೆದ ಬಸವನಾದ ಅಪ್ಪ, ಊರೂರು ತಿರುಗುತ್ತ ಒಬ್ಬರ ಮನೆಯಲ್ಲಿ ಕೆಲಸಕ್ಕಿದ್ದು, ಮಾಲೀಕರ ಮಗಳಾಗಿದ್ದ ಅಮ್ಮನನ್ನು ಮೆಚ್ಚಿ ಮದುವೆಯಾದವನು; ಆಕೆಯನ್ನು ಊರಿಗೆ ಕರೆತಂದಾಗ ಅವನದೆಂದು ಮನೆಯಿರಲಿಲ್ಲ. ನವದಂಪತಿ ದಾಯಾದಿಯ ಪಡಸಾಲೆಯಲ್ಲಿ ನೇರಿಕೆ ಕಟ್ಟಿಕೊಂಡು ಒಲೆ ಹೂಡಬೇಕಾಯಿತು. ಆಗ ಬೋಧಾಳನಾದ ಅಪ್ಪನನ್ನು ಕಟ್ಟಿಕೊಂಡು ಅಮ್ಮ ತಿಪ್ಪೇಸಾಲಲ್ಲಿದ್ದ ಖಾಲಿಜಾಗವೊಂದರಲ್ಲಿ ಮನೆ ಕಟ್ಟಿಸಿದಳು. ಮನೆಯೆಂದರೆ ಮತ್ತೇನಲ್ಲ, ಮಣ್ಣುಗೋಡೆಗಳ ಮೇಲೆ ಬಿದಿರ ಗಳುಹಾಸಿ ಮೆದೆಹುಲ್ಲು ಹೊಚ್ಚಿ ಗೇದ ಕುಟೀರ; ಆದರೇನಂತೆ, ದಾಯಾದಿಗಳ ಹಂಗಿನಾಚೆಯಿದ್ದ ಸ್ವತಂತ್ರ ಹಕ್ಕೆ.